146 (231) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ಹೊಸ ಪಡಿತರ ಚೀಟಿ ವಿತರಿಸಬೇಕೆಂಬ ತೀರ್ಮಾನದ ಹಿನ್ನೆಲೆಯಲ್ಲಿ ಮನೆ ಮನೆ ಸರ್ವೇ ಕಾರ್ಯ ಪ್ರಾರಂಭಿಸಿದ್ದು ಯಾವಾಗ ;

ಆ) ಯಾವ ಯಾವ ಮಾನದಂಡದೊಂದಿಗೆ ಯಾವ ಯಾವ ವರ್ಗದ ನಾಗರಿಕರಿಗೆ ಯಾವ ಯಾವ ಪಡಿತರ ಚೀಟಿ ನೀಡಲಾಗುವುದು ;

ಇ) ತಾತ್ಕಾಲಿಕ ಪಡಿತರ ಚೀಟಿಯನ್ನು ಎಷ್ಟು ಜನಕ್ಕೆ ವಿತರಿಸಲಾಗಿದೆ, ಬಾಕಿ ಉಳಿದಿರುವುದೆಷ್ಟು ;

ಈ) ತಾತ್ಕಾಲಿಕ ಪಡಿತರ ಚೀಟಿ ವಿತರಣೆಯಲ್ಲಿನ ಲೋಪದೋಷಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಲೋಪದೋಷಗಳು ಏನು (ವಿವರ ನೀಡುವುದು) ;

ಉ) ಲೋಪದೋಷಗಳಿಲ್ಲದಂತೆ ಶಾಶ್ವತವಾಗಿ ಪಡಿತರ ಚೀಟಿಯನ್ನು ನೀಡಲಾಗುವುದೇ ;

ಊ) ಹಾಗಿದ್ದಲ್ಲಿ, ಇದಕ್ಕಾಗಿ ಯೋಜಿಸಿರುವ ಕಾಲಮಿತಿ ಮತ್ತು ವೆಚ್ಚಗಳು ಎಷ್ಟು ; (ವಿವರ ನೀಡುವುದು) ?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):

ಅ) ಅರ್ಹ ಫಲಾನುಭವಿಗಳನ್ನು ಗುರುತಿಸಿ ಹೊಸ ಪಡಿತರ ಚೀಟಿಗಳನ್ನು ವಿತರಿಸಲು ಜನವರಿ, 2005ರಿಂದ ಮನೆ ಮನೆ ಸಮೀಕ್ಷಾ ಕಾರ್ಯವನ್ನು ಕೈಗೊಳ್ಳಲಾಗಿತ್ತು.

ಆ) ಅನ್ನಪೂರ್ಣ, ಎಎವೈ, ಬಿಪಿಎಲ್ ಮತ್ತು ಎಪಿಎಲ್ ಪಡಿತರ ಚೀಟಿದಾರರನ್ನು ಗುರುತಿಸಲು ಅಳವಡಿಸಿರುವ ಮಾನದಂಡಗಳ ವಿವರಗಳು ಕೆಳಕಂಡಂತಿರುತ್ತವೆ ;

ಅನ್ನಪೂರ್ಣ ಯೋಜನೆಯಡಿಯಲ್ಲಿ 65 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ವಯೋಮಿತಿಯುಳ್ಳ ನಿರ್ಗತಿಕ ಹಾಗೂ ಕೇಂದ್ರ ಅಥವಾ ರಾಜ್ಯ ಸರ್ಕಾರಗಳಿಂದ ವೃದ್ಧಾಪ್ಯ ವೇತನವನ್ನು ಪಡೆಯದೇ ಇರುವಂತಹ ವ್ಯಕ್ತಿಗಳು ಈ ಯೋಜನೆಯ ಪಡಿತರ ಚೀಟಿ ಪಡೆಯಲು ಅರ್ಹರಾಗಿರುತ್ತಾರೆ.

ಅಂತ್ಯೋದಯ ಅನ್ನ ಯೋಜನೆಯಡಿಯಲ್ಲಿ ಬಿಪಿಎಲ್ ಪಡಿತರ ಚೀಟಿಯನ್ನು ಪಡೆದ ಕಡುಬಡವರು ಅಂದರೆ, ಕೃಷಿ ಕಾರ್ಮಿಕರು ಮತ್ತು

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ವಿಧವೆಯರೇ ಮುಖ್ಯಸ್ಥರಾಗಿರುವ ಕುಟುಂಬ, ಸಾಮಾಜಿಕ ನೆರವಿಲ್ಲದ ವಯೋವೃದ್ಧ ಅಂಗವಿಕಲರು ಪಡಿತರ ಚೀಟಿ ಪಡೆಯಲು ಅರ್ಹರಾಗಿರುತ್ತಾರೆ.

ಬಿಪಿಎಲ್ ಪಡಿತರ ಚೀಟಿ ವಿತರಿಸಲು ಗುರುತಿಸಲು ಕೆಳಕಂಡ ಮಾನದಂಡಗಳನ್ನು ಹೊಂದಿರುವವರು ಅರ್ಹರಿರುವುದಿಲ್ಲ.

1) ಮೂರು ಹೆಕ್ಟೇರ್ ಅಥವಾ ಅದಕ್ಕಿಂತ ಹೆಚ್ಚು ಭೂಮಿ ಹೊಂದಿರುವವರು.

2) ಸ್ಥಿರ ದೂರವಾಣಿ ಹೊಂದಿರುವವರು

3) ಸ್ವಂತವಾಗಿ ಯಾರೇ ಡೀಸಲ್ / ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು (ಲೂನಾ / ಟಿವಿಎಸ್ ಮೊಪೆಡ್‌ಗಳನ್ನು ಹೊಂದಿರುವವರನ್ನು ಹೊರತುಪಡಿಸಿ)

4) ಬ್ಯಾಂಕ್ / ಸಹಕಾರಿ ಸಂಘಗಳಲ್ಲಿ 1.00 ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು.

5) ಒಂದು ಬೋರ್‌ವೆಲ್ ಹೊಂದಿ, ನೀರಾವರಿ ಸೌಕರ್ಯ ಪಡೆಯುತ್ತಿರುವವರು.

6) ತಿಂಗಳಿಗೆ ರೂ. 1,000ಕ್ಕೆ ಕಡಿಮೆ ಇಲ್ಲದೇ ವೇತನ ಪಡೆಯುವ ಸರ್ಕಾರಿ / ಸರ್ಕಾರೇತರ ಖಾಸಗಿ ಸಿಬ್ಬಂದಿಗಳು.

7) ಆದಾಯ ತೆರಿಗೆ ಪಾವತಿಸುವವರು

8) ರಿಜಿಸ್ಟರ್ಡ್ ಕಾಂಟ್ರಾಕ್ಟರ್, ಎಪಿಎಂಸಿ ಟ್ರೇಡರ್ಸ್ / ಕಮೀಷನ್ ಏಜೆಂಟ್ಸ್ / Dealers in Seeds / Fertilizers, etc.,

ಒಟ್ಟಾರೆ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕುಟುಂಬದ ಜೀವನ ಮಟ್ಟವನ್ನು ಕೂಡ ಸಮೀಕ್ಷೆ ಮಾಡಿ ನಿರ್ಣಯಿಸಲಾಗುವುದು.

ತದನಂತರ ನಗರ ಪ್ರದೇಶಕ್ಕೆ ನೀಡಿದ ಮಾರ್ಗಸೂಚಿಗಳಲ್ಲಿ ಈ ಕೆಳಕಂಡ ಮಾನದಂಡಗಳನ್ನು ನಿಗದಿ ಪಡಿಸಲಾಗಿರುತ್ತದೆ.

1) 20"x30" ಚದರ ಅಡಿ ಅಥವಾ ಅದಕ್ಕಿಂತ ಕಡಿಮೆ ಅಳತೆಯುಳ್ಳ ನಿವೇಶನ ಅಥವಾ ಸರ್ಕಾರದ ಯಾವುದೇ ಗೃಹ ನಿರ್ಮಾಣ ಯೋಜನೆ ಅಡಿಯಲ್ಲಿ ಉಚಿತವಾಗಿ ಮನೆ ನೀಡಿರುವ ಕುಟುಂಬಗಳನ್ನು ಬಿಪಿಎಲ್‌ಗೆ ಒಳಪಟ್ಟಿರುವರೆಂದು ಪರಿಗಣಿಸುವುದು.

2) ರಸ್ತೆ ಬದಿಯಲ್ಲಿ ಹಾಗೂ ಸಣ್ಣ ಪ್ರಮಾಣದ ಪೆಟ್ಟಿಗೆ ಅಂಗಡಿಗಳನ್ನು ಇಟ್ಟುಕೊಂಡು ಜೀವನೋಪಾಯಕ್ಕಾಗಿ ವ್ಯವಹಾರ

ಮಾಡುತ್ತಿರುವವರನ್ನು ಹೊರತುಪಡಿಸಿ ಉಳಿದ ಸ್ವಂತ ಅಥವಾ ಬಾಡಿಗೆ ಅಂಗಡಿಗಳಲ್ಲಿ ವ್ಯಾಪಾರ ನಡೆಸುತ್ತಿರುವವರು ಎಪಿಎಲ್ ಅಥವಾ ಗೌರವಾನ್ವಿತ ಪಡಿತರ ಚೀಟಿಗೆ ಅರ್ಹರಿರುವರು.

3) ವಾಸದ / ವಾಣಿಜ್ಯ ಉದ್ದೇಶಕ್ಕಾಗಿ ನೀಡಲಾಗಿರುವ ಅಥವಾ ಪಡೆಯಲಾಗಿರುವ ಕಟ್ಟಡಗಳಿಂದ ಬರುವ ಬಾಡಿಗೆ ಮಾಸಿಕ ರೂ. 2,000/– ಮೀರುವವರು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಿರುವುದಿಲ್ಲ.

ಮೇಲ್ಕಂಡ ಮಾನದಂಡಗಳಿಗೆ ಒಳಪಟ್ಟಲ್ಲಿ ಅಂತಹ ಫಲಾನುಭವಿಗಳು ಬಿಪಿಎಲ್ ಪಡಿತರ ಚೀಟಿಯನ್ನು ಹೊಂದಲು ಅನರ್ಹರಾಗಿರುತ್ತಾರೆ.

ಗ್ರಾಮೀಣ ಪ್ರದೇಶದಲ್ಲಿ ರೂ. 12,000/– ಮತ್ತು ನಗರ ಪ್ರದೆಶದಲ್ಲಿ ರೂ.17,000/– ವಾರ್ಷಿಕ ಆದಾಯ ಮಿತಿಗೆ ಮೇಲ್ಪಟ್ಟು ಆದಾಯ ಹೊಂದಿರುವವರು ಎಪಿಎಲ್ ಪಡಿತರ ಚೀಟಿ ಹೊಂದಲು ಅರ್ಹರಾಗಿರುತ್ತಾರೆ.

ಇ) ತಾತ್ಕಾಲಿಕ ಪಡಿತರ ಚೀಟಿಯನ್ನು ಕುಟುಂಬದ ಮುಖ್ಯಸ್ಥರ ಹೆಸರಿನಲ್ಲಿ ವಿತರಿಸಲಾಗಿದ್ದು, ಪ್ರಸ್ತುತ ರಾಜ್ಯದಲ್ಲಿ ವಿತರಿಸಿರುವ ಪಡಿತರ ಚೀಟಿಗಳ ವಿವರ ಕೆಳಕಂಡಂತಿದೆ.

ಅಂ.ಅ.ಯೋ.	11,75,959
ಅಕ್ಷಯ	53,85,258
ಅನ್ನಪೂರ್ಣ	25,452
ಎಪಿಎಲ್	52,49,489
ಒಟ್ಟು	1,18,36,158

ಈ) ಬಂದಿದೆ. ತಾತ್ಕಾಲಿಕ ಪಡಿತರ ಚೀಟಿ ವಿತರಣೆಯಲ್ಲಿ ಹಲವು ರೀತಿಯ ಲೋಪದೋಷಗಳು ವರದಿಯಾಗಿದ್ದು ಆ ಪೈಕಿ ವರ್ಗಾವಾರು ಅಹವಾಲುಗಳ ವಿವರ ಕೆಳಕಂಡಂತಿದೆ :

1. ನ್ಯಾಯಬೆಲೆ ಅಂಗಡಿ ಬದಲಾವಣೆ
2. ಪಡಿತರ ಚೀಟಿಯಲ್ಲಿ ಹೊಸ ಕುಟುಂಬ ಸದಸ್ಯರ ಸೇರ್ಪಡೆ
3. ಪಡಿತರ ಚೀಟಿಯಲ್ಲಿ ಕುಟುಂಬ ಸದಸ್ಯರ ತೆಗೆದು ಹಾಕುವ ಬಗ್ಗೆ.
4. ಕುಟುಂಬದ ಮುಖ್ಯಸ್ಥರ ಬದಲಾವಣೆ
5. ಇತರೇ ಯಾವುದೇ ರೀತಿಯ ಅಹವಾಲುಗಳು, ತಿದ್ದುಪಡಿಗಳು.

6. ವರ್ಗ ಬದಲಾವಣೆ ಕೋರಿರುವ ಅಹವಾಲುಗಳು

7. ಹೊಸದಾಗಿ ಪಡಿತರ ಚೀಟಿ ಕೋರಿರುವ ಅಹವಾಲುಗಳು

ಉ) ಹೌದು.

ಊ) ಲೋಪದೋಷಗಳ ಬಗ್ಗೆ ಸಾರ್ವಜನಿಕರಿಂದ ಸ್ವೀಕರಿಸಿರುವ ಅಹವಾಲುಗಳನ್ನು ಪೂರ್ಣ ಪ್ರಮಾಣದಲ್ಲಿ ವಿಲೇವಾರಿಗೊಳಿಸಿ ಖಾಯಂ ಪಡಿತರ ಚೀಟಿ ವಿತರಣೆಗೆ ಕ್ರಮ ವಹಿಸಲಾಗುವುದು. ಇದಕ್ಕೆ 6 ತಿಂಗಳ ಕಾಲಾವಕಾಶದಲ್ಲಿ ಕ್ರಮ ವಹಿಸಲಾಗುವುದು. ಶಾಶ್ವತ ಪಡಿತರ ಚೀಟಿಗಳನ್ನು ನೀಡಲು ರೂ. 45–00 ಶುಲ್ಕವನ್ನು ನಿಗಧಿ ಪಡಿಸಲಾಗಿದೆ.

147 (232) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ಮೈಸೂರಿನ ಹಾಪ್‌ಕಾಮ್ಸ್‌ನ್ನು ಬೆಂಗಳೂರಿನ ಹಾಪ್‌ಕಾಮ್ಸ್‌ಗೆ ವಿಲೀನ ಗೊಳಿಸಬೇಕೆಂಬ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಮೈಸೂರಿನ ಭಾಗದ ರೈತರಿಗೆ ಅನುಕೂಲವಾಗುವುದೆಂಬುದು ಸರ್ಕಾರಕ್ಕೆ ತಿಳಿದಿದೆಯೇ ;

ಇ) ಹಾಗಿದ್ದಲ್ಲಿ, ಈ ಪ್ರಸ್ತಾವನೆಗೆ ತೆಗೆದುಕೊಂಡ ಕ್ರಮವೇನು ; (ವಿವರ ನೀಡುವುದು)?

ಶ್ರೀ ಜಿ.ಟಿ. ದೇವೇಗೌಡ (ಸಹಕಾರ ಸಚಿವರು):

ಅ) ಹೌದು

ಆ) ಇಲ್ಲ.

ಇ) ಮೈಸೂರು ಹಾಪ್‌ಕಾಮ್ಸ್‌ನ್ನು ಬೆಂಗಳೂರು ಹಾಪ್‌ಕಾಮ್ಸ್‌ಗೆ ವಿಲೀನಗೊಳಿಸಲು ನೌಕರರು ಮತ್ತು ರೈತರಿಂದ ಮನವಿ ಬಂದಿತ್ತು ಈ ಬಗ್ಗೆ ಸರ್ಕಾರ ಪರಿಶೀಲಿಸಿ, ಪ್ರತಿಯೊಂದು ಜಿಲ್ಲಾ ಹಾಪ್‌ಕಾಮ್‌ಗಳು ಸ್ವಂತ ಸಂಪನ್ಮೂಲ ರೂಢಿಸಿಕೊಂಡು ಆ ವ್ಯಾಪ್ತಿಯ ರೈತರು ಮತ್ತು ಗ್ರಾಹಕರುಗಳಿಗೆ ಸಹಾಯವಾಗಬೇಕೆಂಬ ಉದ್ದೇಶದಿಂದ ವಿಲೀನಗೊಳಿಸುವ ಮನವಿಯನ್ನು ಪರಿಗಣಿಸಿರುವುದಿಲ್ಲ.

148 (233) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ಮೈಸೂರಿನ ಆರ್.ಎಂ.ಸಿ.ಯಲ್ಲಿನ ಮಳಿಗೆಗಳು, ದಾಸ್ತಾನು ಮಳಿಗೆಗಳು ಹಾಗೂ ಇತರೆ ಕಟ್ಟಡಗಳೆಷ್ಟು (ವಿವರ ನೀಡುವುದು) ;